# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

**ಸಾರ್ವಜನಿಕ ಸಂಪರ್ಕ ಇಲಾಖೆ :: ಕೇಂದ್ರ ಕಛೇರಿ :: ಶಾಂತಿ ನಗರ :: ಬೆಂಗಳೂರು-27**

## ***ಪತ್ರಿಕಾ ಪ್ರಕಟಣೆ***

**ವಿಷಯ: ದಿನಾಂಕ:5.6.2018ರಂದು ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಕುರಿತು.**

ದಿನಾಂಕ:05-06-2018 ರಂದು ಸಂಜೆ 04.00 ಗಂಟೆಗೆ ಕರಾರಸಾ,ನಿಗಮದ ಬೆಂಗಳೂರು ಕೇಂದ್ರೀಯ ವಿಭಾಗದ, 2ನೇ ಘಟಕದ ಆವರಣದಲ್ಲಿ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಸಮಾರಂಭದಲ್ಲಿ ಡಾ.ಸಾಲುಮರದ ತಿಮ್ಮಕ್ಕ, ಶ್ರೀ.ಕೆ.ಶ್ರೀನಿವಾಸ್. ಭಾ.ಆ.ಸೇ, ನಿರ್ದೇಶಕರು (ಸಿಬ್ಬಂದಿ & ಪರಿಸರ), ಕರಾರಸಾ ನಿಗಮ, ಡಾ.ಕೆ.ರಾಮಮೂರ್ತಿ, ಮುಖ್ಯ ಯಾಂತ್ರಿಕ ಅಭಿಯಂತರರು (ನಿ) ಕರಾರಸಾ ನಿಗಮ, ಶ್ರೀ. ಎಸ್. ಮನೋಹರ್, ಮುಖ್ಯ ಕಾನೂನು ಅಧಿಕಾರಿ, ಕರಾರಸಾ ನಿಗಮ, ಶ್ರೀ. ಬಿ.ಸಿ. ರೇಣುಕೇಶ್ವರ್, ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ), ಕರಾರಸಾ ನಿಗಮ ಹಾಗೂ ಶ್ರೀ. ಎಂ. ಸುರೇಶ್ ಬಾಬು, ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿ, ಕರಾರಸಾ ನಿಗಮ ಹಾಗೂ ಇನ್ನಿತರೇ ಹಿರಿಯ ಗಣ್ಯ ವ್ಯಕ್ತಿಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಪರಿಸರ ದಿನಾಚರಣೆಯ ಅಂಗವಾಗಿ ಇಂದು ಕೆಎಸ್ಆರ್‌ಟಿಸಿ ಬೆಂಗಳೂರು ಕೇಂದ್ರಿಯ ವಿಭಾಗದ 2ನೇ ಘಟಕದಲ್ಲಿ ಸಸಿ ನೆಡುವ ಮೂಲಕ ಸಾಂಕೇತಿಕವಾಗಿ ಪರಿಸರ ದಿನಾಚರಣೆಗೆ ಚಾಲನೆ ನೀಡಲಾಯಿತು.

ಕೆಎಸ್ಆರ್‌ಟಿಸಿ ಅಧಿಕಾರಿಗಳ ವತಿಯಿಂದ ಸರ್ಕಾರಿ ಶಾಲೆಯ ಹೈಸ್ಕೂಲ್ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ವಿತರಣೆ ಮಾಡಲಾಯಿತು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಭಾರತ ದೇಶದಲ್ಲಿಯೇ ಅತ್ಯಂತ ದೊಡ್ಡದಾದ ಸಾರಿಗೆ ಸಂಸ್ಥೆಯಾಗಿರುತ್ತದೆ. ನಿಗಮವು ತನ್ನ ದೈನಂದಿನ ಸಾರ್ವಜನಿಕ ಸಾರಿಗೆ ಕಾರ್ಯಾಚರಣೆಯ ಜೊತೆಗೆ ಪರಿಸರದ ಮೇಲೆ ಉಂಟಾಗುವ ವ್ಯತಿರಿಕ್ತ ಪರಿಣಾಮಗಳನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸಲು ಕ್ರಮ ಶ್ರಮಪಡಲಾಗುತ್ತಿದೆ. 2017-18ನೇ ಸಾಲಿನಲ್ಲಿ ಈ ಕೆಳಕಂಡ ಪರಿಸರ ಸ್ನೇಹಿ ಅಂಶಗಳನ್ನು ಅನುಷ್ಠಾನಗೊಳಿಸಲಾಗಿದೆ.

1. **ಬಯಲು ಮೂತ್ರ ವಿಸರ್ಜನೆ ನಿಷೇಧ** : ಸಂಸ್ಥೆಯ ಎಲ್ಲಾ ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ / ಕಛೇರಿ / ಘಟಕ/ ವಿಭಾಗೀಯ ಹಾಗೂ ಪ್ರಾದೇಶಿಕ ಕಾರ್ಯಾಗಾರ / ತರಬೇತಿ ಕೇಂದ್ರ / ಕ್ಯಾಂಟೀನ್‌ಗಳ ಆವರಣಗಳಲ್ಲಿ ಮೂತ್ರ ವಿಸರ್ಜನೆ ನಿಷೇಧಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ.

| ಕರಾರಸಾನಿಗಮದ ವ್ಯಾಪ್ತಿಯ ಸಾರ್ವಜನಿಕ ಬಸ್ ನಿಲ್ದಾಣ/ಘಟಕಗಳ ಆವರಣದಲ್ಲಿ ಮೂತ್ರ ವಿಸರ್ಜನೆ ಮಾಡಿದಂತಹ ವ್ಯಕ್ತಿಗಳಿಗೆ ದಂಡ ವಿಧಿಸಿರುವ ವಿವರಗಳ ಪಟ್ಟಿ | | | |
|---|---|---|---|
| **ಕ್ರಮ** | **ಮಾಹೆ** | **ದಂಡ ವಿಧಿಸಿರುವ** | **ದಂಡ ವಿಧಿಸಿರುವ** |

| ಸಂಖ್ಯೆ | | ಪ್ರಯಾಣಿಕರ ಸಂಖ್ಯೆ | ಒಟ್ಟು ಮೊತ್ತ ರೂ. ಪೈಸೆ |
|---|---|---|---|
| 1 | ಜನವರಿ 2016 ರಿಂದ ಮಾರ್ಚ್ 2017 | 30594 | 3059400 |
| 2 | ಏಪ್ರಿಲ್ 2017 ರಿಂದ ಮಾರ್ಚ್ 2018 | 29826 | 2982600 |
| 3 | ಏಪ್ರಿಲ್ 2018 | 1359 | 135900.00 |
| | **ಒಟ್ಟು** | **61779** | **61,77,900** |

**2. <u>ಚಾಲಕರುಗಳಿಗೆ ಉತ್ತಮ ಚಾಲನಾ ಕೌಶಲ್ಯ ತರಬೇತಿ</u>:**

- ನಿಗಮದ ಘಟಕಗಳಲ್ಲಿ ಚಾಲಕರ ಚಾಲನಾ ಹವ್ಯಾಸ ಸುಧಾರಣೆ ಮಾಡಲು ಪ್ರಾತ್ಯಕ್ಷಿತ ತರಬೇತಿ ನೀಡಲು ಅನುವಾಗುವಂತೆ ಸಿಮ್ಯುಲೇಟರ್‌ಗಳನ್ನು ಅಳವಡಿಸಲಾಗಿರುತ್ತದೆ.
- ನಿಗಮದ ಪಿಸಿಆರ್‌ಎ ರವರ ಸಹಯೋಗದೊಂದಿಗೆ 2016-17 ಸಾಲಿನಲ್ಲಿ **978 ಚಾಲಕರುಗಳಿಗೆ** ತರಬೇತಿಯನ್ನು ನೀಡಿದ್ದು, ಇದರಿಂದ ಚಾಲಕರ ಚಾಲನಾ ಹವ್ಯಾಸ ಸುಧಾರಣೆಗೊಂಡು **99,373 ಲಕ್ಷ ಲೀಟರ್** ನಿಂದ **ರೂ: 59,73,311/-** ಸಂಸ್ಥೆಗೆ ಉಳಿತಾಯವಾಗಿರುತ್ತದೆ.
- 2017-18ನೇ ಸಾಲಿನಲ್ಲಿ **4199 ಚಾಲಕರುಗಳಿಗೆ** ತರಬೇತಿಯನ್ನು ನೀಡಿದ್ದು, ಇದರಿಂದ ಚಾಲಕರ ಚಾಲನಾ ಹವ್ಯಾಸ ಸುಧಾರಣೆಗೊಂಡು **3,00,523 ಲಕ್ಷ ಲೀಟರ್** ನಿಂದ **ರೂ: 1,68,29,887/-** ಸಂಸ್ಥೆಗೆ ಉಳಿತಾಯವಾಗಿ ಈ ನಿಟ್ಟಿನಲ್ಲಿ ಇಂಧನ ಬಳಕೆಯ ಕಡಿಮೆಯಿಂದ ವಾಯು ಮಾಲಿನ್ಯ ತಡೆಗಟ್ಟುವಲ್ಲಿ ಸಹಕಾರಿಯಾಗಿರುತ್ತದೆ.

**3. <u>ಮಳೆ ನೀರು ಕೊಯ್ಲು</u>:** ನಿಗಮದ ವ್ಯಾಪ್ತಿಯ ಘಟಕ/ಕಾರ್ಯಗಾರ/ಕಛೇರಿಗಳಲ್ಲಿ **ಈಗಾಗಲೇ ವಿವಿಧ 46 ಸ್ಥಳಗಳಲ್ಲಿ ಮಳೆ ನೀರು ಕೊಯ್ಲುಗಳನ್ನು ಅಳವಡಿಸಲಾಗಿದ್ದು, ಸುಮಾರು 8 ಸ್ಥಳಗಳಲ್ಲಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.** ಮುಂದಿನ ದಿನಗಳಲ್ಲಿ ಹಂತಹಂತವಾಗಿ ಉಳಿದ ಸ್ಥಳಗಳಲ್ಲಿ ಕಾರ್ಯಗತಗೊಳಿಸಲು ಚಾಲನೆಗೆ ತರಲಾಗುತ್ತಿದೆ.

**4. <u>ನೀರು ಪುನರ್ ಬಳಕೆ ಸ್ಥಾವರ:</u>** ಕ.ರಾ.ರ.ಸಾ.ನಿಗಮವು ಈಗಾಗಲೇ 28 ಘಟಕಗಳಲ್ಲಿ ನೀರು ಪುನರ್ ಬಳಕೆ ಸ್ಥಾವರಗಳನ್ನು ಅಳವಡಿಸಲಾಗಿದ್ದು, **ಪ್ರತಿ ವರ್ಷ 2 ಲಕ್ಷ ಕೆ.ಎಲ್ ಲೀಟರ್ ನೀರನ್ನು ಸಂಸ್ಕರಿಸಿ ಮರುಬಳಕೆ**

**ಮಾಡಲಾಗುತ್ತಿದೆ.** ಉಳಿದ 54 ಘಟಕಗಳಲ್ಲಿ ಸದರಿ ಸ್ಥಾವರಗಳನ್ನು ಅಳವಡಿಸಲು ಟೆಂಡರ್ ಪ್ರಕ್ರಿಯೆ ಹಂತದಲ್ಲಿದ್ದು, ಅತಿ ಶೀಘ್ರದಲ್ಲಿ ಕಾರ್ಯಗತಗೊಳಿಸಲು ಕ್ರಮಕೈಗೊಳ್ಳಲಾಗುವುದು.

5. **ಬಸ್ಸುಗಳಿಂದ ಹೊರಸೂಸುವ ವಿಷಪೂರಿತ ಹೊಗೆಯನ್ನು ತಡೆಗಟ್ಟುವ ಪ್ರಯತ್ನಗಳ ಕುರಿತು:**

- ನಿಗಮದ 16 ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು (Pollution Under Control) ಅಂತರ್ಜಾಲಗೊಳಿಸಲಾಗಿದ್ದು, ಎಲ್ಲಾ ವಾಹನಗಳನ್ನು ಅಂತರಜಾಲಗೊಳಿಸಿದ ಹೊಗೆ ತಪಾಸಣೆ ಯಂತ್ರದಿಂದ ಹೊಗೆ ತಪಾಸಣೆಯನ್ನು ಪ್ರತಿ ತಿಂಗಳು ನಡೆಸಲಾಗುತ್ತಿದೆ. **ಸಂಸ್ಥೆಯಲ್ಲಿ 2017-18ರ ಸಾಲಿನಲಿ 75,028 ಹೊಗೆ ತಪಾಸಣೆ ಮಾಡಲಾಗಿದ್ದು, ಎಲ್ಲಾ ವಾಹನಗಳಲ್ಲಿ ಹೊಗೆ ತಪಾಸಣೆ ಪ್ರಮಾಣ ಪತ್ರಗಳನ್ನು ಪ್ರದರ್ಶಿಸಲಾಗಿದೆ.**
- **ಪ್ರಕೃತಿ- ಹಸಿರು ಜಾಗೃತಾ ದಳ ಸ್ವಚ್ಛ ಪರಿಸರಕ್ಕಾಗಿ:** ಕ.ರಾ.ರ.ಸಾ.ನಿಗಮವು ಹೊಗೆ ಹಾಗೂ ಶಬ್ದ ಮಾಲಿನ್ಯವನ್ನು ಉಂಟುಮಾಡುವ ವಾಹನಗಳನ್ನು ಗುರುತಿಸಲು ಸಂಚಾರಿ ತಪಾಸಣಾ ವಾಹನವಾದ "ಪ್ರಕೃತಿ"ಯನ್ನು ಪರಿಚಯಿಸಿದೆ. ಇದರ ಉದ್ದೇಶವು ಘಟಕ ಹಾಗೂ ವಿಭಾಗ ಮಟ್ಟದಲ್ಲಿ ಹೊಗೆ ಪರೀಕ್ಷೆ ಮಾಡಿದ ಹಾಗೂ ಶಬ್ದ ಮಾಲಿನ್ಯ ಉಂಟುಮಾಡುವ ವಾಹನಗಳನ್ನು ತಪಾಸಣೆಗೊಳಪಡಿಸಿ 2017-18ನೇ ಸಾಲಿನಲ್ಲಿ ಒಟ್ಟು **1,346** ಸಂಖ್ಯೆಯ ಅನಿರೀಕ್ಷಿತ ಹೊಗೆ ತಪಾಸಣೆಯನ್ನು ಮಾಡಲಾಗಿದೆ.
- ವಿಭಾಗ ಮಟ್ಟದಲ್ಲಿ ಅನಿರೀಕ್ಷಿತ ಹೊಗೆ ತಪಾಸಣೆಯನ್ನು ಹಮ್ಮಿಕೊಳ್ಳಲಾಗಿದ್ದು **2,469** ವಾಹನಗಳು ತಪಾಸಣೆ ಮಾಡಲಾಗಿರುತ್ತದೆ.
- ಉನ್ನತೀಕರಿಸಿದ ಹೊಗೆ ತಪಾಸಣೆ ಯಂತ್ರಗಳನ್ನು ನಿಗಮದ ಎಲ್ಲಾ ಘಟಕಗಳಿಗೆ ನಿಯತಕಾಲಿಕವಾಗಿ ಮಾಹೆವಾರು ಹೊಗೆ ತಪಾಸಣೆ ನಡೆಸಲು ನೀಡಲಾಗಿದೆ.

6. **ಹೊಸ ಬಿ.ಎಸ್-4 ಪರಿಸರ ಸ್ನೇಹಿ ವಾಹನಗಳ ಸೇರ್ಪಡೆ:** 2017-18ನೇ ಸಾಲಿನಲ್ಲಿ ಸಂಸ್ಥೆಗೆ ಹೊಸ ಮಾದರಿಯ ಕರ್ನಾಟಕ ಸಾರಿಗೆ ವಾಹನಗಳು **1094**, ಮಿಡಿ ವಾಹನಗಳು **143**, ಗ್ರಾಮಾಂತರ ಸಾರಿಗೆ ವಾಹನಗಳು **89**, ನಾನ್ ಏಸಿ ಸ್ಲೀಪರ್-**15**, ರಾಜಹಂಸ ವಾಹನಗಳು-**34**, ವೋಲ್ವೋ ಮಲ್ಟಿ ಆಕ್ಸ್‌ಲ್ **69** ವಾಹನಗಳು ಸೇರ್ಪಡೆಯಾಗಿದ್ದು, ಇವುಗಳು **ಬಿಎಸ್IV** ಮಾದರಿಯ ವಾಹನಗಳಾಗಿದ್ದು ವಾಯುಮಾಲಿನ್ಯ ತಡೆಗಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿರುತ್ತದೆ.

7. **ಅಪಾಯಕಾರಿ ತ್ಯಾಜ್ಯ ವಸ್ತುಗಳ ವಿಲೇವಾರಿ ನಿರ್ವಹಣೆ:**

- ತ್ಯಾಜ್ಯ ವಿಲೇವಾರಿ: ಅಪಾಯಕಾರಿ ತ್ಯಾಜ್ಯಗಳಾದ ಬಳಸಿದ ಕೀಲೆಣ್ಣೆಗಳನ್ನು ಘಟಕಗಳಿಂದ ಸಂಗ್ರಹಿಸಿ ಮರುಬಳಕೆಗಾಗಿ ಮಾನ್ಯತೆ ಪಡಿದ (ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ ಅವರಿಂದ ಅಧಿಕೃತವಾಗಿ ಗುರುತಿಸಲ್ಪಟ್ಟ ಸಂಸ್ಥೆಗಳಿಗೆ) ಮರುಬಳಕೆದಾರರಿಗೆ ನೀಡಲಾಗುತ್ತಿದೆ.
- ನಿಗಮದ ಎಲ್ಲಾ ವಿಭಾಗಗಳಲ್ಲಿ ಹೊಂದಿರುವ ಟೈರ್ ಪುನಃಶ್ಚೇತನ ಸ್ಥಾವರಗಳಲ್ಲಿ ಉತ್ಪಾದನೆಯಾಗುವ ಹಂತದಲ್ಲಿ ಉಂಟಾಗುವ ರಬ್ಬರ್ ಚೂರುಗಳು ಹಾಗೂ ಟೈರ್ ಚೂರುಗಳನ್ನು ರಬ್ಬರ್ ತಯಾರಕರಿಗೆ ರಬ್ಬರ್ ಪುನರ್ ತಯಾರಿಕೆಗಾಗಿ ನೀಡಲಾಗುತ್ತಿದೆ.
- ಕ.ರಾ.ರ.ಸಾ.ನಿಗಮವು ವಾಯು ಮಾಲಿನ್ಯ ನಿಯಂತ್ರಣಾ ಮಂಡಳಿಗೆ ಕಾಲಕಾಲಕ್ಕೆ ವರದಿಯನ್ನು ಪರಿಸರದ ಮೇಲೆ ನಿಗಮಕ್ಕಿರುವ ಕಾಳಜಿಯಿಂದ ನೀಡಲಾಗುತ್ತಿದೆ.

8. **<u>ವಾಯು ಮತ್ತು ನೀರಿನ ಗುಣಮಟ್ಟ ಪರೀಕ್ಷೆ</u>**: ಸಂಸ್ಥೆಯ ವಿವಿಧ ಘಟಕ ಹಾಗೂ ವಿಭಾಗಗಳಲ್ಲಿ Ambient Air quality ಮತ್ತು ಕುಡಿಯುವ ನೀರಿನ ಗುಣಮಟ್ಟದ ಬಗ್ಗೆ ಪರಿಶೀಲನೆಗೆ ಹಾಗೂ ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ.

9. **<u>ವಿದ್ಯುತ್ ಶಕ್ತಿ ನಿರ್ವಹಣೆ</u>**: ನಿಗಮದ ಕೇಂದ್ರ ಕಛೇರಿಯಲ್ಲಿ ಸೋಲಾರ್ ದೀಪಗಳ ಬಳಕೆಯನ್ನು ಅಳವಡಿಸಲು ಕ್ರಮ ಜರುಗಿಸಲಾಗುತ್ತಿದೆ.

10. **<u>ಪ್ಲಾಸ್ಟಿಕ್ ನಿಷೇಧ:</u>** ಪ್ಲಾಸ್ಟಿಕ್ ಬಳಕೆಯನ್ನು ತಡೆಗಟ್ಟಲು ಸರ್ಕಾರದ ಅಧಿಸೂಚನೆ ಪಾಲನೆಗೆ ಪತ್ರ ಮುಖೇನ ವಿಭಾಗ/ಕಾರ್ಯಾಗಾರಗಳಿಗೆ ಸೂಚಿಸಲಾಗಿದ್ದು. ಈ ವರ್ಷದ ವಿಶ್ವ ಪರಿಸರ ದಿನಾಚರಣೆಗೆ **"Beat Plastic Pollution"** ಎಂಬ ಧ್ಯೇಯೋದ್ದೇಶವನ್ನು ಸಕಾರಗೊಳಿಸಲು ಬಸ್ ನಿಲ್ದಾಣಗಳಲ್ಲಿ/ಕಛೇರಿಗಳಲ್ಲಿ ಪ್ಲಾಸ್ಟಿಕ್ ನಿಷೇಧದ ಬಗ್ಗೆ ಅರಿವು ಮೂಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.

11. **<u>ಅರಣ್ಯೀಕರಣ ಕಾರ್ಯಕ್ರಮ:</u>** ಕ.ರಾ.ರ.ಸಾ.ನಿಗಮವು ಈಗಾಗಲೇ ಸುಮಾರು 1,56,000 ಸಸಿಗಳನ್ನು ಇಲ್ಲಿಯವರೆಗೆ ನೆಡಲಾಗಿದ್ದು, 2017-18ನೇ ಸಾಲಿನಲ್ಲಿ 22,800 ಸಸಿಗಳನ್ನು ನಿರ್ವಹಣೆ ಮತ್ತು ಸಂರಕ್ಷಣೆ ಮಾಡಲಾಗಿರುತ್ತದೆ.

ಸಹಿ/-

ಸಾರ್ವಜನಿಕ ಸಂಪರ್ಕಾಧಿಕಾರಿ,